# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೬–ಸಿ<br>Part – VI C | ಮೈಸೂರು, ಗುರುವಾರ, ೧೨, ಮಾರ್ಚ್, ೨೦೨೬ (ಫಾಲ್ಗುಣ, ೨೧, ಶಕವರ್ಷ, ೧೯೪೭)<br>MYSURU, THURSDAY, 12, MARCH, 2026 ( PHALGUNA, 21, SHAKAVARSHA, 1947) | ನಂ. ೦೭<br>No. 07 |
|---|---|---|



**ಜಿಲ್ಲಾಧಿಕಾರಿಗಳ ಹಾಗೂ**
**ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ**
**ಕೊಡಗು ಜಿಲ್ಲೆ, ಮಡಿಕೇರಿ–571201**

**ಕಛೇರಿ: 08272–225500**
**ನಿವಾಸ: 08272–225700**
**ಫ್ಯಾಕ್ಸ್: 08272–225900**
**ಈ–ಮೇಲ್:dckodagu@mail.kar.nic.in**
**ವೆಬ್ ಸೈಟ್:** http://www.kodagu.nic.in


---

ಸಂಖ್ಯೆ/ಚುನಾ/(ಪ.ಪಂ.ಪೊ)/72/2025-26 ದಿನಾಂಕ:12-03-2026

## ಅಧಿಸೂಚನೆ

ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲ್ಲೂಕಿನ ತಾಲ್ಲೂಕು ಕೇಂದ್ರವಾಗಿರುವ ಪೊನ್ನಂಪೇಟೆ ಗ್ರಾಮ ಪಂಚಾಯಿತಿಯನ್ನು ಮತ್ತು ಬಲ್ಯಮಂಡೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾನೂರು ರಸ್ತೆ ಕಾಲೋನಿ, ಮಾಪಿಳ್ಳೆತೋಡು ಸೇತುವೆ, ಕಾವೇರಮ್ಮ ಬಡಾವಣೆ ಮತ್ತು ಇತರ ಬಡಾವಣೆಗಳು ಒಳಗೊಂಡಂತೆ ಸಂಪೂರ್ಣ ಮುಗುಟಗೇರಿ ಗ್ರಾಮವನ್ನು ಸೇರಿಕೊಂಡಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ:221:ಎಂಎಲ್ಆರ್:2022(ಇ) ದಿನಾಂಕ:24-07-2024 ರಂತೆ ಪೊನ್ನಂಪೇಟೆ ಪಟ್ಟಣ ಪಂಚಾಯಿತಿಯನ್ನಾಗಿ ಘೋಷಣೆ ಮಾಡಿ ಅಧಿಸೂಚನೆ ಹೊರಡಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ/4/ಎಂಎಲ್ಆರ್/2014 ಬೆಂಗಳೂರು ದಿನಾಂಕ:15-02-2014ರ ಆದೇಶದಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಾರ್ಡ್ ಪುನರ್ ವಿಂಗಡಣೆ ಮಾಡುವ ಬಗ್ಗೆ ಹೊರಡಿಸಿರುವ ಮಾರ್ಗಸೂಚಿಯನ್ನು ಅನುಸರಿಸಿ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಮಡಿಕೇರಿ ಇವರ ಪತ್ರ ಸಂಖ್ಯೆ:ಡಿಯುಡಿಸಿ/ಪೊ.ತಾ/96/2020-21 ದಿನಾಂಕ:20-02-2026ರಂತೆ ಪೊನ್ನಂಪೇಟೆ ಪಟ್ಟಣ ಪಂಚಾಯಿತಿ ವಾರ್ಡ್ ಗಳನ್ನು 2011ರ ಜನಗಣತಿಯ ಆಧಾರದ ಮೇರೆ ಪುನರ್ ವಿಂಗಡಣೆ ಮಾಡಿ ಅಧಿಸೂಚನೆ ಹೊರಡಿಸಲು ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಕರ್ನಾಟಕ ಪೌರಸಭೆಗಳ ಅಧಿನಿಯಮ-1964ರ ಪ್ರಕರಣ 13ರ ಮೇರೆಗೆ ಪೊನ್ನಂಪೇಟೆ ಪಟ್ಟಣ ಪಂಚಾಯಿತಿಯ ವಾರ್ಡ್ ಗಳನ್ನು 2011ರ ಜನಗಣತಿಯನ್ನು ಆಧಾರಿಸಿ ಪುನರ್ ವಿಂಗಡಣೆ ಮಾಡಿ, ವಾರ್ಡ್ನ ಹೆಸರು ಹಾಗೂ ವಾರ್ಡ್ನ ವ್ಯಾಪ್ತಿಗೆ ಒಳಪಡುವ ಪ್ರದೇಶದ ವಿವರ ಮತ್ತು ಚೆಕ್ಕುಬಂದಿಗಳನ್ನು ವಿವರವಾಗಿ ನಮೂದಿಸಿ ಈ ಕಚೇರಿ ಅಧಿಸೂಚನೆ ಸಂಖ್ಯೆ/ಚುನಾ/ಪ.ಪಂ.ಪೊ/ 72/2025-26 ದಿನಾಂಕ:20-02-2026 ರಂತೆ ಕರಡು ಅಧಿಸೂಚನೆ ಹೊರಡಿಸಿ, ಕರಡು ಅಧಿಸೂಚನೆಯನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಿ, ಕರಡು ಅಧಿಸೂಚನೆ ಬಗ್ಗೆ ಯಾವುದೇ ಆಕ್ಷೇಪಣೆಯನ್ನು / ಸಲಹೆಗಳನ್ನು ಸಲ್ಲಿಸಲು ಇಚ್ಛಿಸುವ ವ್ಯಕ್ತಿಗಳು ಅದನ್ನು ಲಿಖಿತದಲ್ಲಿ ಕಾರಣ ಸಹಿತವಾಗಿ ಸದರಿ ಅಧಿಸೂಚನೆಯನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ, ಮಡಿಕೇರಿ ಇವರಿಗೆ ಸಲ್ಲಿಸಬೇಕೆಂದು ತಿಳಿಸಲಾಗಿದೆ.

ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು / ಸಲಹೆಗಳು ಸ್ವೀಕೃತವಾಗಿರುವುದಿಲ್ಲ.

ಆದ್ದರಿಂದ ಕರ್ನಾಟಕ ಪೌರಸಭೆಗಳ ಅಧಿನಿಯಮ-1964ರ ಪ್ರಕರಣ 13ರ ಮೇರೆಗೆ ಪೊನ್ನಂಪೇಟೆ ಪಟ್ಟಣ ಪಂಚಾಯಿತಿಯ ವಾರ್ಡ್ ಗಳನ್ನು 2011ರ ಜನಗಣತಿಯನ್ನು ಆಧಾರಿಸಿ ಈ ಕೆಳಕಂಡಂತೆ ಪುನರ್ ವಿಂಗಡಣೆ ಮಾಡಿ, ವಾರ್ಡಿನ ಹೆಸರು ಹಾಗೂ ವಾರ್ಡಿನ ವ್ಯಾಪ್ತಿಗೆ ಒಳಪಡುವ ಪ್ರದೇಶದ ವಿವರ ಮತ್ತು ಚೆಕ್ಕುಬಂದಿಗಳನ್ನು ವಿವರವಾಗಿ ನಮೂದಿಸಿ ಅಧಿಸೂಚನೆ ಹೊರಡಿಸಿದೆ

## ವಾರ್ಡ್ ಗಳ ವಿವರ

1. ನಗರ ಸ್ಥಳೀಯ ಸಂಸ್ಥೆ ಹೆಸರು : **ಪಟ್ಟಣ ಪಂಚಾಯಿತಿ, ಪೊನ್ನಂಪೇಟೆ.**
2. ವಾರ್ಡ್ ಗಳ ಸಂಖ್ಯೆ :**11**

## ಪೊನ್ನಂಪೇಟೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ವಾರ್ಡ್ ಗಳ ವಿವರ ಮತ್ತು ಚೆಕ್ಕುಬಂದಿ ವಿವರ.

| ಕ್ರ. ಸಂ. | ವಾರ್ಡ್‌ನ ಹೆಸರು ಮತ್ತು ಸಂಖ್ಯೆ | ವಾರ್ಡ್‌ನ ಪ್ರದೇಶ ವ್ಯಾಪ್ತಿ (ಚೆಕ್ಕುಬಂದಿ) |
|---|---|---|
| 1. | **ವಾರ್ಡ್ ನಂ. 01** | ಪೊನ್ನಂಪೇಟೆ ಪಟ್ಟಣ ಪಂಚಾಯಿತಿಯ 01ನೇ ವಾರ್ಡ್ ಅರುವತ್ತೊಕ್ಕಲು ಗ್ರಾಮದ ಸ. ನಂ. 174/10 ರಿಂದ ಪ್ರಾರಂಭಗೊಂಡು ರಾಜ್ಯ ಹೆದ್ದಾರಿ ಮೂಲಕ ದಕ್ಷಿಣಾಭಿಮುಖವಾಗಿ ಸಾಗುತ್ತ ಹೆದ್ದಾರಿಯ ಬಲಭಾಗದ ಪ್ರದೇಶಗಳನ್ನೊಳಗೊಂಡು ಹಳ್ಳಿಗಟ್ಟು ಗ್ರಾಮದ ಸ. ನಂ. 20 ರ ಜಮ್ಮಡ ಡಾಲಿ ರವರ ಮನೆಯವರೆಗೆ ತಲುಪುತ್ತದೆ. ನಂತರ ಬಲಕ್ಕೆ ತಿರುಗಿ ಅಡ್ಡರಸ್ತೆಯ (ಮಾಜಿ ಸೈನಿಕ ಕೂಕಂಡ ಪೊನ್ನಪ್ಪ ರಸ್ತೆ) ಮೂಲಕ ಪಶ್ಚಿಮಾಭಿಮುವಾಗಿ ಸಾಗಿ ರಸ್ತೆಯ ಬಲಭಾಗದ ಎಲ್ಲಾ ಪ್ರದೇಶಗಳನ್ನು ಒಳಗೊಂಡು ಕೂಕಂಡ ಪೂಣಚ್ಚ ರವರ ಮನೆಯ ವರೆಗೆ ತಲುಪುತ್ತದೆ. ನಂತರ ಉತ್ತರಕ್ಕೆ ತಿರುಗಿ ಮುಂದೆ ಸಾಗುತ್ತ ಬಲಭಾಗದ ಎಲ್ಲಾ ಪ್ರದೇಶಗಳನ್ನು ಒಳಗೊಂಡು ಅರುವತ್ತೊಕ್ಕಲು ಗ್ರಾಮದ ಸ. ನಂ. 139 ರಲ್ಲಿ ಬಲಕ್ಕೆ ತಿರುಗಿ ಬಲಭಾಗದ ಎಲ್ಲಾ ಪ್ರದೇಶಗಳನ್ನು ಒಳಗೊಂಡು ಅರುವತ್ತೊಕ್ಕಲು ಗ್ರಾಮದ ಸ. ನಂ. 174/10 ನ್ನು ತಲುಪುತ್ತದೆ.<br><br>**ಉತ್ತರ**: ಅರುವತ್ತೊಕ್ಕಲು ಗ್ರಾಮ ಪಂಚಾಯಿತಿ ಗಡಿ<br>**ದಕ್ಷಿಣ:** ವಾರ್ಡ್ ನಂ. 03<br>**ಪೂರ್ವ:**ರಾಜ್ಯ ಹೆದ್ದಾರಿ<br>**ಪಶ್ಚಿಮ:** ಅರುವತ್ತೊಕ್ಕಲು ಗ್ರಾಮ ಪಂಚಾಯಿತಿ ಗಡಿ |
| 2. | **ವಾರ್ಡ್ ನಂ. 02** | ಪೊನ್ನಂಪೇಟೆ ಪಟ್ಟಣ ಪಂಚಾಯಿತಿಯ 02ನೇ ವಾರ್ಡ್ ಪೊನ್ನಂಪೇಟೆ – ಗೋಣಿಕೊಪ್ಪಲು ಮುಖ್ಯ ರಸ್ತೆಯ ಬಾಳೆಲೆ ಕೂಡು ರಸ್ತೆ ಬಳಿಯ ಮಹಿಳಾ ಸಮಾಜದಿಂದ ಪ್ರಾರಂಭವಾಗಿ ಬಾಳೆಲೆ ರಸ್ತೆಯ ಮೂಲಕ ಸಾಗುತ್ತ ರಸ್ತೆಯ ಎಡಭಾಗದ ಎಲ್ಲಾ ಪ್ರದೇಶಗಳನ್ನು ಒಳಗೊಂಡು ಮತ್ತೂರು ಗ್ರಾಮದ 5/4ನ್ನು ತಲುಪುತ್ತದೆ. ಆನಂತರ ಎಡಕ್ಕೆ ತಿರುಗಿ ಉತ್ತರಾಭಿಮುಖವಾಗಿ ಸಾಗುತ್ತಾ ಮತ್ತೂರು ಗ್ರಾಮದ ಸ. ನಂ. 5/7, 5/11, 5/3, ರ ಮೂಲಕ ಸಾಗಿ ಮತ್ತೂರು ಗ್ರಾಮ ಸ. ನಂ. 1/2 ನ್ನು ತಲುಪುತ್ತದೆ. ಆನಂತರ ಬಾಳಾಜಿ ರಸ್ತೆಯ ಮೂಲಕ ಎಡಕ್ಕೆ ತಿರುಗಿ ರಸ್ತೆಯ ಎಡಭಾಗದ ಎಲ್ಲಾ ಪ್ರದೇಶಗಳನ್ನು ಒಳಗೊಂಡು ಪಶ್ಚಿಮಾಭಿಮುಖವಾಗಿ ಸಾಗುತ್ತಾ ಮತ್ತೂರು ಗ್ರಾಮದ ಸ. ನಂ. 1/1, 1/10 ರ ಮೂಲಕ ಉತ್ತರಕ್ಕೆ ತಿರುಗಿ ಸಾಗಿ ಮುಖ್ಯ ರಸ್ತೆಯ ಬಲಭಾಗದ ಭಾಗಗಳನ್ನು ಒಳಗೊಂಡ ಅರುವತ್ತೊಕ್ಕಲು ಗ್ರಾಮದ ಸ. ನಂ. 163/2 ನ್ನು ತಲುಪುತ್ತದೆ.<br><br>**ಉತ್ತರ**: ಮಾಯಮುಡಿ ಗ್ರಾಮ ಪಂಚಾಯಿತಿ ಗಡಿ(ಬಾಳಾಜಿ)<br>**ದಕ್ಷಿಣ:** ವಾರ್ಡ್ ನಂ 05<br>**ಪೂರ್ವ:** ಮಾಯಮುಡಿ ಗ್ರಾಮ ಪಂಚಾಯಿತಿ ಗಡಿ(ಬಾಳಾಜಿ)<br>**ಪಶ್ಚಿಮ:** ಪೊನ್ನಂಪೇಟೆ-ಗೋಣಿಕೊಪ್ಪಲು ಮುಖ್ಯ ರಸ್ತೆ |
| 3. | **ವಾರ್ಡ್ ನಂ. 03** | ಪೊನ್ನಂಪೇಟೆ ಪಟ್ಟಣ ಪಂಚಾಯಿತಿಯ 03ನೇ ವಾರ್ಡ್ ಉತ್ತರದಲ್ಲಿ ಚೇಂದ್ರಿಮಾಡ ಸೋಮಯ್ಯ ರವರ ಕಟ್ಟಡದಿಂದ ಪ್ರಾರಂಭಗೊಂಡು ರಾಜ್ಯ ಹೆದ್ದಾರಿ ಮೂಲಕ ಸಾಗುತ್ತ ಹೆದ್ದಾರಿಯ ಬಲಭಾಗದ ಎಲ್ಲಾ ಪ್ರದೇಶಗಳನ್ನೊಳಗೊಂಡು ಸಿ. ಎಂ. |

| | | |
|---|---|---|
| | | ದೇವಯ್ಯ ರವರ ಕಟ್ಟಡ(ಮುತ್ತಮ್ಮ ಕಲ್ಯಾಣ ಮಂಟಪ) ವರೆಗೆ ತಲುಪುತ್ತದೆ. ನಂತರ ಬಲಕ್ಕೆ ತಿರುಗಿ ಅಡ್ಡ ರಸ್ತೆಯ ಮೂಲಕ ಪಶ್ಚಿಮಾಭಿಮುಖವಾಗಿ ಸಾಗುತ್ತ ರಸ್ತೆಯ ಬಲ ಮತ್ತು ಎಡಭಾಗದ ಪ್ರದೇಶಗಳನ್ನು ಒಳಗೊಂಡು ಹಳ್ಳಿಗಟ್ಟು ಗ್ರಾಮದ ಸ. ನಂ. 88 ರ ಜಾಗ(ಮೂಕಳೇರ ಗಣೇಶ್ ರವರ ಜಾಗ) ತಲುಪುತ್ತದೆ. ನಂತರ ಬಲಕ್ಕೆ ತಿರುಗಿ ಉತ್ತರಾಭಿಮುಖವಾಗಿ ಸಾಗಿ ಕೂಕಂಡ ಪೂಣಚ್ಚ ರವರ ಮನೆಯ ಹತ್ತಿರ ತಲುಪುತ್ತದೆ. ಆನಂತರ ಬಲಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಸಾಗುತ್ತ ರಸ್ತೆಯ ಬಲಭಾಗದ ಪ್ರದೇಶಗಳನ್ನು ಒಳಗೊಂಡು ರಾಜ್ಯ ಹೆದ್ದಾರಿ ಬಳಿಯ ಚೇಂದ್ರಿಮಾಡ ಸೋಮಯ್ಯ ರವರ ಕಟ್ಟಡದ ಹತ್ತಿರ ತಲುಪುತ್ತದೆ.<br><br>**ಉತ್ತರ**: ವಾರ್ಡ್ ನಂ. 01<br>**ದಕ್ಷಿಣ:**ವಾರ್ಡ್ ನಂ. 04<br>**ಪೂರ್ವ:** ರಾಜ್ಯ ಹೆದ್ದಾರಿ<br>**ಪಶ್ಚಿಮ:**ಅರುವತ್ತೊಕ್ಕಲು ಗ್ರಾಮ ಪಂಚಾಯಿತಿ ಗಡಿ (ಹಳ್ಳಿಗಟ್ಟು ಗ್ರಾಮ) |
| 4. | **ವಾರ್ಡ್ ನಂ. 04** | ಪೊನ್ನಂಪೇಟೆ ಪಟ್ಟಣ ಪಂಚಾಯಿತಿಯ 4ನೇ ವಾರ್ಡ್ ಉತ್ತರದಲ್ಲಿ ಮೂಕಳೇರ ಪ್ರಮೀಳ ಮಾದಪ್ಪ ರವರ ಕಟ್ಟಡದಿಂದ ಪ್ರಾರಂಭವಾಗಿ ರಾಜ್ಯ ಹೆದ್ದಾರಿ ಮೂಲಕ ದಕ್ಷಿಣಾಭಿಮುಖವಾಗಿ ಸಾಗುತ್ತಾ ಹೆದ್ದಾರಿಯ ಬಲಭಾಗದ ಎಲ್ಲಾ ಪ್ರದೇಶಗಳನ್ನು ಒಳಗೊಂಡು ಕರ್ನಾಟಕ ಪಬ್ಲಿಕ್ ಶಾಲೆ(ಜ್ಯೂನಿಯರ್ ಕಾಲೇಜು) ತಲುಪುತ್ತದೆ. ನಂತರ ಬಲಕ್ಕೆ ತಿರುಗಿ ಐಬಿ ರಸ್ತೆಯ ಮೂಲಕ ಸಾಗುತ್ತಾ ರಸ್ತೆಯ ಬಲಭಾಗದ ಎಲ್ಲಾ ಪ್ರದೇಶಗಳನ್ನೊಳಗೊಂಡು ಮೂಕಳಮಾಡ ಶಾರದ ರವರ ಮನೆಗೆ ತಲುಪುತ್ತದೆ. ನಂತರ ನಿಸರ್ಗನಗರ ರಸ್ತೆಯ ಮೂಲಕ ಪಶ್ಚಿಮಾಭಿಮುಖವಾಗಿ ಸಾಗುತ್ತಾ ರಸ್ತೆಯ ಬಲಭಾಗದ ಪ್ರದೇಶಗಳನ್ನು ಒಳಗೊಂಡು ಕಡೇಮಾಡ ಅಣ್ಣಯ್ಯ ರವರ ಮನೆವರೆಗೆ ತಲುಪುತ್ತದೆ. ಆನಂತರ ಬಲಕ್ಕೆ ತಿರುಗಿ ಹಳ್ಳಿಗಟ್ಟು ಗ್ರಾಮದ ಸ. ನಂ. 82 ರ ಹತ್ತಿರ ತೋಡಿನ ಮೂಲಕ ಸಾಗಿ(ಸ. ನಂ. 83, 84 ಮತ್ತು 94) ಹಳ್ಳಿಗಟ್ಟು ಗ್ರಾಮದ ಸ. ನಂ. 87/3ನ್ನು ತಲುಪುತ್ತದೆ. ನಂತರ ಬಲಕ್ಕೆ ತಿರುಗಿ ಉತ್ತರಾಭಿಮುಖವಾಗಿ ಸಾಗುತ್ತಾ ಮೂಕಳೇರ ಸಬಿತ ರವರ ಮನೆಯವರೆಗೆ ತಲುಪುತ್ತದೆ. ತದಾ ನಂತರ ಬಲಕ್ಕೆ ತಿರುಗಿ ಬಲಭಾಗದ ಎಲ್ಲಾ ಪ್ರದೇಶಗಳನ್ನೊಳಗೊಂಡು ಸ. ನಂ. 85, ಸ. ನಂ. 69 ಮೂಲಕ ಸಾಗಿ ಮೂಕಳೇರ ಪ್ರಮೀಳ ಮಾದಪ್ಪ ರವರ ಕಟ್ಟಡದ ತಲುಪುತ್ತದೆ.<br><br>**ಉತ್ತರ**: ವಾರ್ಡ್ ನಂ. 03<br>**ದಕ್ಷಿಣ:**ವಾರ್ಡ್ ನಂ. 06<br>**ಪೂರ್ವ:** ರಾಜ್ಯ ಹೆದ್ದಾರಿ<br>**ಪಶ್ಚಿಮ:** ಅರುವತ್ತೊಕ್ಕಲು ಗ್ರಾಮ ಪಂಚಾಯಿತಿ ಗಡಿ (ಹಳ್ಳಿಗಟ್ಟು ಗ್ರಾಮ) |
| 5. | **ವಾರ್ಡ್ ನಂ. 05** | ಪೊನ್ನಂಪೇಟೆ ಪಟ್ಟಣ ಪಂಚಾಯಿತಿಯ 05 ನೇ ವಾರ್ಡ್ ಪೊನ್ನಂಪೇಟೆ ಮುಖ್ಯ ರಸ್ತೆ (ಸಿಪಿಕೆ ರಸ್ತೆ) ಯ ಎಡಭಾಗದ ಆದೇಂಗಡ ಅಯ್ಯಪ್ಪ ರವರ ಕಟ್ಟಡದಿಂದ ಪೂರ್ವಾಭಿಮುಖವಾಗಿ ಸಾಗುತ್ತ ರಸ್ತೆಯ ಎಡಭಾಗದ ಎಲ್ಲಾ ಪ್ರದೇಶಗಳನ್ನು ಒಳಗೊಂಡು ಬಸವೇಶ್ವರ ದೇವರ ಗದ್ದೆಯ ಮೂಲಕವಾಗಿ ಎಡಭಾಗದ ಎಲ್ಲಾ ಪ್ರದೇಶಗಳನ್ನು ಒಳಗೊಂಡು ಮತ್ತೂರು ಗ್ರಾಮದ ಸ. ನಂ. 10/3, 10/2, 10/4 ರ ಮೂಲಕ ಸಾಗಿ ಮತ್ತೂರು ಗ್ರಾಮದ ಸ. ನಂ. 10/2 ನ್ನು ತಲುಪುತ್ತದೆ. ನಂತರ ಎಡಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಚಲಿಸುತ್ತಾ ಕಿರುಗೂರು ಪೊನ್ನಂಪೇಟೆ ಮುಖ್ಯರಸ್ತೆಯ ಎಡಭಾಗದ ಎಲ್ಲಾ ಪ್ರದೇಶಗಳನ್ನು ಒಳಗೊಂಡು ಪೊನ್ನಂಪೇಟೆ-ಬಾಳೆಲೆ ಕೂಡುರಸ್ತೆಯನ್ನು ಸೇರುತ್ತದೆ. ಆನಂತರ ಎಡಕ್ಕೆ ತಿರುಗಿ ಪೊನ್ನಂಪೇಟೆ-ಗೋಣಿಕೊಪ್ಪ ಮುಖ್ಯ ರಸ್ತೆಯ ಮೂಲಕವಾಗಿ ಬಸವೇಶ್ವರ ದೇವಸ್ಥಾನವನ್ನು ಒಳಗೊಂಡಂತೆ ರಸ್ತೆಯ ಎಡಭಾಗದ ಎಲ್ಲಾ ಪ್ರದೇಶಗಳನ್ನು ಒಳಗೊಂಡು ಪೊನ್ನಂಪೇಟೆ ಮುಖ್ಯ ರಸ್ತೆ (ಸಿಪಿಕೆ ರಸ್ತೆ) ಯ ಎಡಭಾಗದ ಆದೇಂಗಡ ಅಯ್ಯಪ್ಪ ರವರ ಮನೆಯ ಹತ್ತಿರ ತಲುಪುತ್ತದೆ.<br><br>**ಉತ್ತರ**: ವಾರ್ಡ್ ನಂ. 02<br>**ದಕ್ಷಿಣ:** ವಾರ್ಡ್ ನಂ 08<br>**ಪೂರ್ವ:** ಕಿರುಗೂರು ಗ್ರಾಮ ಪಂಚಾಯಿತಿ ಗಡಿ (ಮತ್ತೂರು ಗ್ರಾಮ)<br>**ಪಶ್ಚಿಮ:** ಪೊನ್ನಂಪೇಟೆ ಗೋಣಿಕೊಪ್ಪಲು ಮುಖ್ಯ ರಸ್ತೆ |

| | | |
|---|---|---|
| 6. | **ವಾರ್ಡ್ ನಂ. 06** | ಪೊನ್ನಂಪೇಟೆ ಪಟ್ಟಣ ಪಂಚಾಯಿತಿಯ 06 ನೇ ವಾರ್ಡ್ ಉತ್ತರದಲ್ಲಿ ಐಬಿ ರಸ್ತೆಯ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಸತಿಗೃಹದಿಂದ ಪ್ರಾರಂಭವಾಗಿ ರಾಜ್ಯ ಹೆದ್ದಾರಿ ಮೂಲಕ ಸಾಗಿ ಕಾರು ನಿಲ್ದಾಣದ ಹತ್ತಿರ (ಕುಂದ ರಸ್ತೆ) ತಲುಪುತ್ತದೆ. ಆನಂತರ ಬಲಕ್ಕೆ ತಿರುಗಿ ಕೃಷಿ ಸಂಶೋಧನಾ ಕೇಂದ್ರವನ್ನು ಒಳಗೊಂಡು ಪಶ್ಚಿಮಾಭಿಮುಖವಾಗಿ ಸಾಗುತ್ತ ರಸ್ತೆಯ ಬಲ ಮತ್ತು ಎಡ ಭಾಗದ ಎಲ್ಲಾ ಪ್ರದೇಶಗಳನ್ನೊಳಗೊಂಡು ನಿನಾದ ಶಾಲೆಯ ತೋಡಿನ ವರೆಗೆ ತಲುಪುತ್ತದೆ. ನಂತರ ಬಲಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಸಾಗುತ್ತ ಮೂಕಳೇರ ಕುಟುಂಬಸ್ಥರ ಗದ್ದೆಗಾಗಿ ಸಾಗಿ ಬಲಭಾಗದ ಎಲ್ಲಾ ಪ್ರದೇಶಗಳನ್ನೊಳಗೊಂಡು ಹಳ್ಳಿಗಟ್ಟು ಗ್ರಾಮದ ಸ. ನಂ. 82 ನ್ನು ತಲುಪುತ್ತದೆ. ನಂತರ ಬಲಕ್ಕೆ ತಿರುಗಿ ಅಡ್ಡ ರಸ್ತೆಯ ಮೂಲಕ ದಕ್ಷಿಣಾಭಿಮುಖವಾಗಿ ಸಾಗುತ್ತ ರಸ್ತೆ ಬಲಭಾಗದ ಎಲ್ಲಾ ಪ್ರದೇಶಗಳನ್ನು ಒಳಗೊಂಡು ನಿಸರ್ಗನಗರ ರಸ್ತೆ ಮೂಲಕ ಸಾಗಿ ಬಲಭಾಗದ ಎಲ್ಲಾ ಪ್ರದೇಶಗಳನ್ನು ಒಳಗೊಂಡು ಐಬಿ ರಸ್ತೆಯ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಸತಿಗೃಹದ ಹತ್ತಿರ ತಲುಪುತ್ತದೆ.<br><br>**ಉತ್ತರ**: ವಾರ್ಡ್ ನಂ. 04<br>**ದಕ್ಷಿಣ:**ವಾರ್ಡ್ ನಂ. 07<br>**ಪೂರ್ವ:** ರಾಜ್ಯ ಹೆದ್ದಾರಿ<br>**ಪಶ್ಚಿಮ:** ಅರುವತ್ತೊಕ್ಕಲು ಗ್ರಾಮ ಪಂಚಾಯಿತಿ ಗಡಿ (ಹಳ್ಳಿಗಟ್ಟು ಗ್ರಾಮ) |
| 7. | **ವಾರ್ಡ್ ನಂ. 07** | ಪೊನ್ನಂಪೇಟೆ ಪಟ್ಟಣ ಪಂಚಾಯಿತಿಯ 07 ನೇ ವಾರ್ಡ್ ಕೆಪಿಎಸ್ ಶಾಲಾ ಕಟ್ಟಡ(ಹಳೆ ಸಮುದಾಯ ಆರೋಗ್ಯ ಉಪಕೇಂದ್ರ) ದಿಂದ ಪ್ರಾರಂಭಗಾಗಿ ರಾಜ್ಯ ಹೆದ್ದಾರಿ ಮೂಲಕ ಸಾಗುತ್ತಾ ರಸ್ತೆಯ ಬಲಭಾಗದ ಎಲ್ಲಾ ಪ್ರದೇಶಗಳನ್ನು ಒಳಗೊಂಡು ಸುಬ್ರಮಣ್ಯ ನಗರ ರಸ್ತೆಗೆ ತಲುಪುತ್ತದೆ. ನಂತರ ಬಲಕ್ಕೆ ತಿರುಗಿ ಸುಬ್ರಮಣ್ಯ ನಗರ ರಸ್ತೆಯ ಬಲಭಾಗದ ಎಲ್ಲಾ ಪ್ರದೇಶಗಳನ್ನು ಒಳಗೊಂಡು ಸಾಗುತ್ತಾ ಹುದೂರು ಗ್ರಾಮ ಅಡ್ಡಂಡ ನಿಲನ್ ರವರ ತೋಟದ ಹತ್ತಿರದ ತೋಡನ್ನು ತಲುಪುತ್ತದೆ. ನಂತರ ತೋಡಿನ ಹತ್ತಿರ ಬಲಕ್ಕೆ ತಿರುಗಿ ಉತ್ತರಾಭಿಮುಖವಾಗಿ ಸಾಗುತ್ತಾ ಹುದೂರು ಗ್ರಾಮದ ಸ. ನಂ. 20/1 ಮತ್ತು 8/1 ರ ಮೂಲಕ 8/2 ನ್ನು ತಲುಪುತ್ತದೆ. ನಂತರ ಬಲಕ್ಕೆ ತಿರುಗಿ ಬಲಭಾಗದ ಎಲ್ಲಾ ಪ್ರದೇಶಗಳನ್ನು ಒಳಗೊಂಡು ಕೃಷಿ ಸಂಶೋಧನೆ ಕೇಂದ್ರದ ಹಿಂಭಾಗದ ರಸ್ತೆಯ ಮೂಲಕ ಸಾಗಿ ಕೆಪಿಎಸ್ ಶಾಲಾ ಕಟ್ಟಡ(ಹಳೆ ಸಮುದಾಯ ಆರೋಗ್ಯ ಉಪಕೇಂದ್ರ)ವನ್ನು ತಲುಪುತ್ತದೆ.<br>**ಉತ್ತರ**: ವಾರ್ಡ್ ನಂ. 06<br>**ದಕ್ಷಿಣ:**ವಾರ್ಡ್ ನಂ. 09<br>**ಪೂರ್ವ:** ರಾಜ್ಯ ಹೆದ್ದಾರಿ<br>**ಪಶ್ಚಿಮ:** ಅರುವತ್ತೊಕ್ಕಲು ಗ್ರಾಮ ಪಂಚಾಯಿತಿ ಗಡಿ (ಹುದೂರು ಗ್ರಾಮ) |
| 8. | **ವಾರ್ಡ್ ನಂ. 08** | ಪೊನ್ನಂಪೇಟೆ ಪಟ್ಟಣ ಪಂಚಾಯಿತಿಯ 08 ನೇ ವಾರ್ಡ್ ಪೊನ್ನಂಪೇಟೆ-ಕಾನೂರು ಕೂಡು ರಸ್ತೆಯ ಎಡಭಾಗದ ಮಲಚೀರ ನಂಜಪ್ಪ ರವರ ಕಟ್ಟಡದಿಂದ ಪ್ರಾರಂಭವಾಗಿ ದಕ್ಷಿಣಾಭಿಮುಖವಾಗಿ ಸಾಗುತ್ತಾ ಕಾನೂರು ರಸ್ತೆಯ ಮೂಲಕ ಮುಗುಟಗೇರಿ ಗ್ರಾಮದ ಸ. ನಂ. 24, 47 ರ ಮೂಲಕ ಸಾಗಿ ಮುಗುಟಗೇರಿ ಗ್ರಾಮದ ಗಡಿ ಸ. ನಂ. 80 ನ್ನು ತಲುಪುತ್ತದೆ. ಆನಂತರ ಎಡಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಸಾಗುತ್ತ ಮುಗುಟಗೇರಿ ಗ್ರಾಮದ ಸ. ನಂ. 79 ತಲುಪುತ್ತದೆ. ಆನಂತರ ಎಡಕ್ಕೆ ತಿರುಗಿ ಮುಗುಟಗೇರಿ ಗ್ರಾಮದ ಸ. ನಂ. 56,54, 62ರ ಮೂಲಕ ಸಾಗಿ ಮತ್ತೂರು ಗ್ರಾಮದ ಸ. ನಂ. 44/1, 48/1 ರ ಮೂಲಕ ಸಾಗಿ ಮತ್ತೂರು ಗ್ರಾಮದ ಸ. ನಂ. 53 ನ್ನು ತಲುಪುತ್ತದೆ. ಆನಂತರ ಎಡಕ್ಕೆ ತಿರುಗಿ ಪಶ್ಚಿಮಾಭಿಮುಖವಾಗಿ ಸಾಗಿ ಎಡಭಾಗದ ಎಲ್ಲಾ ಪ್ರದೇಶಗಳನ್ನು ಒಳಗೊಂಡು ಪೊನ್ನಂಪೇಟೆ ಮುಖ್ಯರಸ್ತೆ (ರಾಜ್ಯಹೆದ್ದಾರಿ) ಮಂಜುನಾಥ್ ಲಾಯರ್ ರವರ ಮನೆಗೆ ತಲುಪುತ್ತದೆ. ಆನಂತರ ಎಡಕ್ಕೆ ತಿರುಗಿ ಮುಖ್ಯ ರಸ್ತೆಯ ಎಡಭಾಗದ ಎಲ್ಲಾ ಪ್ರದೇಶಗಳನ್ನು ಒಳಗೊಂಡು ಪೊನ್ನಂಪೇಟೆ – ಕಾನೂರು ಕೂಡು ರಸ್ತೆಯ ಎಡಭಾಗದ ಮಲಚೀರ ನಂಜಪ್ಪ ರವರ ಮನೆಗೆ ತಲುಪುತ್ತದೆ.<br><br>**ಉತ್ತರ**: ವಾರ್ಡ್ ನಂ. 05<br>**ದಕ್ಷಿಣ:** ಬಲ್ಯಮಂಡೂರು ಗ್ರಾಮ ಪಂಚಾಯಿತಿ ಗಡಿ<br>**ಪೂರ್ವ:** ಕಿರುಗೂರು ಗ್ರಾಮ ಪಂಚಾಯಿತಿ ಗಡಿ (ಮತ್ತೂರು ಗ್ರಾಮ)<br>**ಪಶ್ಚಿಮ:** ಮುಖ್ಯ ರಸ್ತೆ (ಪೊನ್ನಂಪೇಟೆ-ಕಾನೂರು ರಸ್ತೆ) ಮತ್ತು ವಾರ್ಡ್ ನಂ.11 |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



| | | |
|---|---|---|
| 9. | **ವಾರ್ಡ್ ನಂ. 09** | ಪೊನ್ನಂಪೇಟೆ ಪಟ್ಟಣ ಪಂಚಾಯಿತಿಯ 09 ನೇ ವಾರ್ಡ್ ಸುಬ್ರಮಣ್ಯ ನಗರ ರಸ್ತೆಯ ಎಡಭಾಗದ ಪ್ರದೇಶಗಳನ್ನು ಒಳಗೊಂಡು ಅಣ್ಣೀರ ಮಾದಯ್ಯ ರವರ ಮನೆಯ ಹತ್ತಿರದಿಂದ ಕೃಷ್ಣಕಾಲೋನಿ ಜಂಕ್ಷನ್ ಮೂಲಕ ಕೃಷ್ಣಕಾಲೋನಿ ರಸ್ತೆಯ ಎರಡು ಬದಿಯ ಪ್ರದೇಶಗಳನ್ನು ಒಳಗೊಂಡು ಅಡ್ಡಂಡ ಉಷಾ ತಿಮ್ಮಯ್ಯ ಬಡಾವಣೆಯ ಮೂಲಕ ಸರ್ವೆ ನಂ 35, 30/10,30/03, ತೋಡು, 30/2 ರ ಮೂಲಕ ಹಾದು ಅಣ್ಣೀರ ಮಾದಯ್ಯ ರವರ ಮನೆಯ ಹತ್ತಿರ ತಲುಪುತ್ತದೆ.<br><br>**ಉತ್ತರ**: ವಾರ್ಡ್ ನಂ. 07<br>**ದಕ್ಷಿಣ:**ವಾರ್ಡ್ ನಂ. 10<br>**ಪೂರ್ವ:** ರಾಜ್ಯ ಹೆದ್ದಾರಿ(ಪೊನ್ನಂಪೇಟೆ ಹುದಿಕೇರಿ ರಸ್ತೆ)<br>**ಪಶ್ಚಿಮ:** ಅರುವತ್ತೊಕ್ಕಲು ಗ್ರಾಮ ಪಂಚಾಯಿತಿ ಗಡಿ (ಹುದೂರು ಗ್ರಾಮ) |
| 10. | **ವಾರ್ಡ್ ನಂ. 10** | ಪೊನ್ನಂಪೇಟೆ ಪಟ್ಟಣ ಪಂಚಾಯಿತಿಯ 10 ನೇ ವಾರ್ಡ್ ಕೃಷ್ಣಕಾಲೋನಿ ಜಂಕ್ಷನಿನ ವಿ. ಜಿ. ಮನೋಹರ್ ರವರ ಮನೆಯಿಂದ ಪ್ರಾರಂಭವಾಗಿ ದಕ್ಷಿಣಾಭಿಮುಖವಾಗಿ ಚಲಿಸುತ್ತಾ ಅಪ್ಪಚ್ಚ ಕವಿ ವಿದ್ಯಾಲಯ, ಪೊನ್ನಪ್ಪ ಬಡಾವಣೆ, ಕಲ್ಲುಕೋರೆ, ತನ್ನಿಕೋಡ್, ಮಾಪಿಳ್ಳೆತೋಡ್ ಪಕ್ಕದಲ್ಲಿರುವ ಚಾಮುಂಡಿ ಬಡಾವಣೆಯವರೆಗೆ ಮತ್ತು ಸ. ನಂ. 128 ಮತ್ತು ತೋಡನ್ನು ಒಳಗೊಂಡು ಸರ್ವೆ ನಂ. 35/1, 15/1, 14, ತೋಡು, ಸರ್ವೆ ನಂ 3/4 ಸೇರಿಕೊಂಡು ಕಡಂಗದ ಮೂಲಕ ಕೃಷ್ಣ ಕಾಲೋನಿ ಜಂಕ್ಷನಿಗೆ ಬಂದು ತಲುಪುತ್ತದೆ.<br><br>**ಉತ್ತರ**: ವಾರ್ಡ್ ನಂ. 09<br>**ದಕ್ಷಿಣ:**ವಾರ್ಡ್ ನಂ. 11<br>**ಪೂರ್ವ:** ರಾಜ್ಯ ಹೆದ್ದಾರಿ (ಪೊನ್ನಂಪೇಟೆ ಹುದಿಕೇರಿ ರಸ್ತೆ)<br>**ಪಶ್ಚಿಮ:** ಅರುವತ್ತೊಕ್ಕಲು ಗ್ರಾಮ ಪಂಚಾಯಿತಿ ಗಡಿ (ಹುದೂರು ಗ್ರಾಮ) |
| 11. | **ವಾರ್ಡ್ ನಂ. 11** | ಪೊನ್ನಂಪೇಟೆ ಪಟ್ಟಣ ಪಂಚಾಯಿತಿಯ 11 ನೇ ವಾರ್ಡ್ ಹುದಿಕೇರಿ ಕುಟ್ಟ ಜಂಕ್ಷನ್ ಎಡಭಾಗದ ಬಸ್ಸುತಂಗುದಾಣ ಮತ್ತು ಮರ್ಕರ ಅಂಗಡಿಯಿಂದ ಪ್ರಾರಂಭವಾಗಿ ದಕ್ಷಿಣಾಭಿಮುಖವಾಗಿ ಚಲಿಸುತ್ತಾ ಸಂತ ಅಂತೋಣಿ ಶಾಲೆ, ಭಗವತಿ ನಗರ, ಕಾವೇರಮ್ಮ ಬಡಾವಣೆ, ಮುತ್ತುಕಾ ಮನೆ ಮೂಸರವರ ಬಾಡಿಗೆ ಮನೆ ಒಳಗೊಂಡು ಪಕ್ಕದ ತೋಡಿನ ಮೂಲಕ ಗದ್ದೆಗಳನ್ನು ಒಳಗೊಂಡಂತೆ ಸರ್ವೆ ನಂ 146/2, 144/1, 109, 107, 106/1, 105/2, 105/1, 100, 99 ಮೂಲಕ ಕಾನೂರು ಕುಟ್ಟ ರಸ್ತೆಗೆ ತಲುಪುತ್ತದೆ. ತದ ನಂತರ ಉತ್ತರಾಭಿಮುಖದಲ್ಲಿ ಮುಗುಟಗೇರಿ ಜಂಕ್ಷನ್ MTK & SONS ರವರ ಮನೆ ಕುಟ್ಟಿಚಾತ ದೇವಸ್ಥಾನ, ಎ ಎನ್ ಕರುಂಬಯ್ಯ ರವರ ಮನೆ, ಮುದ್ದಿಯಡ ಮಂಜು ರವರ ಮನೆ, ಅಗಸ್ತ್ಯ ಬಡಾವಣೆ, ಆಲೆಮಾಡ ನವೀನ್ ರವರ ಮನೆ, ಬಿ ಎಂ ಬಡಾವಣೆ ಒಳಗೊಂಡು ಕಾನೂರು ಜಂಕ್ಷನಿನ ಬಸ್ಸು ತಂಗುದಾಣಕ್ಕೆ ಬಂದು ತಲುಪುತ್ತದೆ.<br><br>**ಉತ್ತರ**: ವಾರ್ಡ್ ನಂ. 10<br>**ದಕ್ಷಿಣ:**ಬಲ್ಯಮಂಡೂರು ಗ್ರಾಮ ಪಂಚಾಯಿತಿ ಗಡಿ<br>**ಪೂರ್ವ:**ಪೊನ್ನಂಪೇಟೆ-ಕಾನೂರು ಮುಖ್ಯ ರಸ್ತೆ<br>**ಪಶ್ಚಿಮ:**ರಾಜ್ಯ ಹೆದ್ದಾರಿ ಮತ್ತು ಹುದಿಕೇರಿ ಗ್ರಾಮ ಪಂಚಾಯಿತಿ ಗಡಿ |

**ಜಿಲ್ಲಾಧಿಕಾರಿ,**
**ಕೊಡಗು ಜಿಲ್ಲೆ, ಮಡಿಕೇರಿ.**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಮೈಸೂರು.

VIJAY NELAMANGALA
MUNIDALAPPA